# ಕರ್ನಾಟಕಸರ್ಕಾರ
# ಸಮಾಜಕಲ್ಯಾಣಇಲಾಖೆ
# ಇಂದಿರಾಗಾಂಧಿವೃತ್ತಿಅಭಿವೃದ್ದಿಕೇಂದ್ರ

ಸಂಖ್ಯೆ: ಇವೃಅಕೇ/ಎಸ್-2/ಸಿ.ಆರ್-KAS/2024

ಇಂದಿರಾಗಾಂಧಿವೃತ್ತಿಅಭಿವೃದ್ದಿಕೇಂದ್ರ,
ಮಾಗಡಿಮುಖ್ಯರಸ್ತೆ, ಸುಮನಹಳ್ಳಿ,
ಬೆಂಗಳೂರು – 560091.
ದಿನಾಂಕ:22.01.2024

## ಅಧಿಸೂಚನೆ

ವಿಷಯ: 2024-25ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ. ಇಂದಿರಾಗಾಂಧಿ ವೃತ್ತಿ ಅಭಿವೃದ್ದಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಕೆ.ಎ.ಎಸ್/ಗ್ರೂಪ್-ಸಿ/ಬ್ಯಾಂಕಿಂಗ್/ಎಸ್ ಎಸ್ ಸಿ /ಆರ್ ಆರ್ ಬಿ/ನ್ಯಾಯಾಂಗ ಸೇವೆ ಪೂರ್ವಭಾವಿ ತರಬೇತಿಗೆ ಆಯ್ಕೆ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ, ಇಂದಿರಾಗಾಂಧಿ ವೃತ್ತಿ ಅಭಿವೃದ್ದಿ ಕೇಂದ್ರದ ಮೂಲಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಕೆ.ಎ.ಎಸ್/ಗ್ರೂಪ್-ಸಿ/ಬ್ಯಾಂಕಿಂಗ್/ಎಸ್ ಎಸ್ ಸಿ /ಆರ್ ಆರ್ ಬಿ/ನ್ಯಾಯಾಂಗ ಸೇವೆ ಪೂರ್ವಭಾವಿ ತರಬೇತಿ ನೀಡಲು ಉದ್ದೇಶಿಸಲಾಗಿದೆ.

ಕೆ.ಎ.ಎಸ್/ಗ್ರೂಪ್-ಸಿ/ಬ್ಯಾಂಕಿಂಗ್/ಎಸ್ ಎಸ್ ಸಿ /ಆರ್ ಆರ್ ಬಿ/ನ್ಯಾಯಾಂಗ ಸೇವೆ ಪೂರ್ವಭಾವಿ ತರಬೇತಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿಗಧಿತ ಗುರಿಗನುಗುಣವಾಗಿ ಆಯ್ಕೆ ಮಾಡಲಾಗುತ್ತದೆ. ಸದರಿ ಅಭ್ಯರ್ಥಿಗಳಿಗೆ ಶಿಷ್ಯವೇತನವನ್ನು ಸರ್ಕಾರದಿಂದ ಮಂಜೂರಾದ ದರದಲ್ಲಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು ಮತ್ತು ತರಬೇತಿ ವೆಚ್ಚವನ್ನು ತರಬೇತಿ ಸಂಸ್ಥೆಗಳಿಗೆ ಪಾವತಿಸಲಾಗುವುದು.

ಕೆ.ಎ.ಎಸ್/ಗ್ರೂಪ್-ಸಿ/ಬ್ಯಾಂಕಿಂಗ್/ಎಸ್ ಎಸ್ ಸಿ /ಆರ್ ಆರ್ ಬಿ/ನ್ಯಾಯಾಂಗ ಸೇವೆ ಪೂರ್ವಭಾವಿ ತರಬೇತಿಯ ಅವಧಿ, ಶೈಕ್ಷಣಿಕ ವಿದ್ಯಾರ್ಹತೆ, ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ ಮತ್ತುಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ವಿವರ | |
|---|---|---|
| 01 | **ಕೋರ್ಸ್‌ಗಳ, ವಿವರ ತರಬೇತಿ ಅವಧಿ (ತಿಂಗಳು)** | KAS – 7 Months.<br>GROUP-C/BANKING/RRB/SSC/JUDICIARY-03 Months |
| 02 | **ವಯಸ್ಸು** | 21 ರಿಂದ 37 ವರ್ಷ |
| 03 | **ಕೋರ್ಸಿನ ವಿವರ** | **ಸದರಿ ತರಬೇತಿಗೆ ಪದವಿಯಲ್ಲಿ ಉತ್ತೀರ್ಣರಾಗಿರುವ ಮತ್ತು ಅಂತಿಮ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿದ್ದು, ಆಯ್ಕೆ ಪ್ರಕ್ರಿಯೆ ಹಂತದಲ್ಲಿ ಪದವಿ ವ್ಯಾಸಂಗ ಪೂರ್ಣ ಮುಕ್ತಾಯಗೊಳಿಸಿರುವ ಬಗ್ಗೆ ಅಧಿಕೃತ ದಾಖಲೆಗಳನ್ನು ಹೊಂದಿರಬೇಕು.** |
| 04 | **ಅಭ್ಯರ್ಥಿಯಸಾಮಾನ್ಯಅರ್ಹತೆ** | 1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು;<br>2. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ನಿಗಧಿತ ನಮೂನೆಯಲ್ಲಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ಪಡೆದಿರಬೇಕು.<br>3. ದೈಹಿಕ ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿ, ನಿಗಧಿತ ಪ್ರಾಧಿಕಾರದಿಂದ ನಿಗಧಿಪಡಿಸಲಾದ ಕೊನೆಯ ದಿನಾಂಕದೊಳಗೆ ಅಂಗವಿಕಲ ಪ್ರಮಾಣಪತ್ರ ಪಡೆದಿರಬೇಕು.<br>4. ವಿದ್ಯಾರ್ಥಿನಿಲಯ / ಕ್ರೈಸ್ ವಿದ್ಯಾರ್ಥಿನಿಲಯ / ಸಫಾಯಿ ಕರ್ಮಚಾರಿ ಮೀಸಲಾತಿಯಡಿ ಅರ್ಜಿ |

| | | |
|---|---|---|
| | | ಸಲ್ಲಿಸುವ ಅಭ್ಯರ್ಥಿ ನಿಗಧಿತ ನಮೂನೆಯಲ್ಲಿ ಪ್ರಮಾಣಪತ್ರ ಪಡೆದಿರಬೇಕು. |
| 05 | **ವಾರ್ಷಿಕ ಆದಾಯ** | ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ. 5.00 ಲಕ್ಷ ಮೀರರಬಾರದು. |
| 06 | **ಆಯ್ಕೆ ವಿಧಾನ** | 1. ಅಭ್ಯರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ.<br>2. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಕೌನ್ಸಿಲಿಂಗ್ ಮೂಲಕ ಅಭ್ಯರ್ಥಿಗಳನ್ನು ತರಬೇತಿ ಸಂಸ್ಥೆಗೆ ನಿಯೋಜಿಸಲಾಗುತ್ತದೆ. |
| 07 | **ಶಿಷ್ಯವೇತನ (ಮಾಸಿಕ)** | ಮಾಸಿಕ ಶಿಷ್ಯ ವೇತನ<br>ಕೆ.ಎ.ಎಸ್-ರೂ. 5000/- (ಪ್ರತಿ ಮಾಹೆ 07 ತಿಂಗಳು)<br>ಗ್ರೂಪ್-ಸಿ/ಬ್ಯಾಂಕಿಂಗ್/ಎಸ್ ಎಸ್ ಸಿ /ಆರ್ ಆರ್ ಬಿ/ನ್ಯಾಯಾಂಗ ಸೇವೆ-ರೂ. 5000/- (ಪ್ರತಿ ಮಾಹೆ 03 ತಿಂಗಳು) |
| ಬಯೋಮೆಟ್ರಿಕ್ ಶಿಷ್ಯವೇತನವನ್ನು ಪ್ರತಿಮಾಹೆ ತರಬೇತಿ ಸಂಸ್ಥೆಯವರು ಸಲ್ಲಿಸುವ ಹಾಜರಾತಿಯನ್ವಯ ಪಾವತಿಸಲಾಗುವುದು. ಆದರೆ ತರಬೇತಿ ಅವಧಿಯಲ್ಲಿ ಯಾವುದೇ ವಸತಿ ಸೌಲಭ್ಯವನ್ನು ಇಲಾಖಾವತಿಯಿಂದ ನೀಡಲಾಗುವುದಿಲ್ಲ. | | |
| 08 | **ಅರ್ಜಿ ಸಲ್ಲಿಸುವ ವೆಬ್-ಸೈಟ್ ವಿಳಾಸ** | https://swdservices.karnataka.gov.in/IGCCD |
| 09 | **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** | **20.02.2025** |

**ಸ್ಥಾನ ಹಂಚಿಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ : -**

| ಕ್ರ.ಸಂ | ಮೀಸಲಾತಿ | ಶೇಕಡವಾರು | ಅರ್ಹರು | ಷರಾ |
|---|---|---|---|---|
| 01 | ಅಂಗವಿಕಲ / ವಿಕಲಚೇತನ | 4 | Right of Person with disabilities acts 2016 ರಂತೆ ಸಕ್ಷಮ ಪ್ರಾಧಿಕಾರದಿಂದ ದಿವ್ಯಾಂಗ ಪ್ರಮಾಣಪತ್ರ ಹೊಂದಿದವರು. | ನಿಗಧಿತ ಸ್ಥಾನಕ್ಕೆ ಅರ್ಹ ದಿವ್ಯಾಂಗ ಅಭ್ಯರ್ಥಿಗಳು ದೊರೆಯದಿದ್ದರೆ ಇತರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಆಯ್ಕೆಗೆ ಅವಕಾಶ ಕಲ್ಪಿಸಲಾಗುವುದು. |
| 02 | ಹಾಸ್ಟೆಲ್ ವಿದ್ಯಾರ್ಥಿಗಳು | 10 | ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ನಿರ್ದೇಶನಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಅಲ್ಪ ಸಂಖ್ಯಾತರ ಇಲಾಖೆ, ಪ್ರಿ-ಮೆಟ್ರಿಕ್ / ಪೋಸ್ಟ್-ಮೆಟ್ರಿಕ್ / ಆಶ್ರಮ ಶಾಲೆಯಲ್ಲಿ ಕನಿಷ್ಟ ಮೂರು ವರ್ಷ ನಿಲಯಾರ್ಥಿಗಳಾಗಿದ್ದ ವಿದ್ಯಾರ್ಥಿಗಳು. | ಸಂಬಂಧಪಟ್ಟ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕರಿಂದ ನಮೂನೆ – A ರಲ್ಲಿ ವಿದ್ಯಾರ್ಥಿನಿಲಯದ ಅಭ್ಯರ್ಥಿ ಪ್ರಮಾಣಪತ್ರ ಪಡೆದಿರಬೇಕು. |
| 03 | ವಸತಿಶಾಲೆಯ ವಿದ್ಯಾರ್ಥಿಗಳು | 10 | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಮತ್ತು ಅಲ್ಪಸಂಖ್ಯಾತರ ಇಲಾಖೆ ಅಡಿ ಬರುವ ಮೊರಾರ್ಜಿದೇಸಾಯಿ/ ಕಿತ್ತೂರುರಾಣಿ ಚೆನ್ನಮ್ಮ/ ಅಂಬೇಡ್ಕರ್ ವಸತಿಶಾಲೆ ಯಲ್ಲಿ ಕನಿಷ್ಠ -05 ವರ್ಷ ವಿದ್ಯಾಭ್ಯಾಸ | ಸಂಬಂಧಪಟ್ಟ ವಸತಿ ಶಾಲಾ ಪ್ರಾಂಶುಪಾಲರಿಂದ 05 ವರ್ಷ ಅಧ್ಯಯನ ಮಾಡಿದ ಪ್ರಮಾಣಪತ್ರವನ್ನು ನಮೂನೆ – B ರಲ್ಲಿ ಪಡೆದಿರಬೇಕು. |

| | | | | |
|---|---|---|---|---|
| | | | ಮಾಡಿದಅಭ್ಯರ್ಥಿಗಳು. | |
| 04 | ಮಹಿಳಾ ಅಭ್ಯರ್ಥಿಗಳು | 33 | ಮಹಿಳಾ ಮೀಸಲಾತಿಯಂತೆ | ನಿಗಧಿತ ಸಂಖ್ಯೆಯಲ್ಲಿ ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದರೆ ಪುರುಷ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅವಕಾಶವನ್ನು ಕಲ್ಪಿಸಲಾಗುತ್ತದೆ. |
| 05 | ಸೂಕ್ಷ್ಮ / ಅತಿಸೂಕ್ಷ್ಮ ಸಮುದಾಯ / ಸಫಾಯಿ ಕರ್ಮಚಾರಿ ಸಮುದಾಯದ ಮಕ್ಕಳು | 5 | | ನಿಗಧಿತ ಸಂಖ್ಯೆಯಲ್ಲಿ ಸೂಕ್ಷ್ಮ / ಅತಿಸೂಕ್ಷ್ಮ / ಅಲೆಮಾರಿ ಸಮುದಾಯದ ಅಭ್ಯರ್ಥಿಗಳು ದೊರೆಯದಿದ್ದರೆ ಇತರೆ ಪರಿಶಿಷ್ಟ ಜಾತಿ / ಪಂಗಡದ ಅಭ್ಯರ್ಥಿಗಳಿಗೆ ಅವಕಾಶವನ್ನು ಕಲ್ಪಿಸಲಾಗುವುದು. |

**<u>ಗಮನದಲ್ಲಿಡಬೇಕಾದಅಂಶಗಳು :-</u>**

- ಇಲಾಖಾ ವೆಬ್ ಸೈಟ್ನಲ್ಲಿ ಕಾಲಕಾಲಕ್ಕೆ ನೀಡಲಾಗುವ ಮಾಹಿತಿಯು ಅಧಿಕೃತ ಹಾಗೂ ಅಂತಿಮವಾಗಿರುತ್ತದೆ.

- ಯು.ಪಿ.ಎಸ್.ಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಇಲಾಖೆಯಿಂದ ಈಗಾಗಲೇ ತರಬೇತಿ ಪಡೆದ ಅಭ್ಯರ್ಥಿಗಳು ಪುನಃ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಕೆ.ಎ.ಎಸ್ / ಎಸ್.ಎಸ್.ಸಿ / ಆರ್.ಆರ್.ಬಿ / ಬ್ಯಾಂಕಿಂಗ್ /ಗ್ರೂಪ್-ಸಿ ಮತ್ತು ನ್ಯಾಯಾಂಗ ಸೇವೆ ಮೊದಲಾದ ಸ್ಪರ್ಧಾತ್ಮಕ ಪರೀಕ್ಷೆಗೆ ಇಲಾಖೆಯಿಂದ ತರಬೇತಿ ಪಡೆದ ಅಭ್ಯರ್ಥಿಗಳು ಯು.ಪಿ.ಎಸ್.ಸಿ ತರಬೇತಿಗೆ ಅರ್ಜಿಸಲ್ಲಿಸಲು ಅರ್ಹರಿರುತ್ತಾರೆ.
- ಇಲಾಖಾವತಿಯಿಂದ ಯಾವುದೇ ಪತ್ರವ್ಯವಹಾರವನ್ನು ನಡೆಸಲಾಗುವುದಿಲ್ಲವಾದ್ದರಿಂದ, ಇಲಾಖಾ ವೆಬ್ಸೈಟ್ಅನ್ನು ಕಾಲಕಾಲಕ್ಕೆ ವೀಕ್ಷಿಸತಕ್ಕದ್ದು ಹಾಗೂ ವೆಬ್ಸೈಟ್ನಲ್ಲಿ ನೀಡಲಾದ ಸೂಚನೆಯಾನುಸಾರವಾಗಿ ಪ್ರವೇಶ ಪರೀಕ್ಷಾಪತ್ರ ಡೌನ್ಲೋಡ್ ಮಾಡಿಕೊಂಡು, ಸಾಮಾನ್ಯ ಪ್ರವೇಶ ಪರೀಕ್ಷೆಗೆ,

ತರಬೇತಿ ಸಂಸ್ಥೆಯ ಆಯ್ಕೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವುದು.

- ಈಗಾಗಲೇ ಇಲಾಖೆಯ ಮೂಲಕ 2024-25 ನೇ ಸಾಲಿನ ಉಚಿತ ಯು.ಪಿ.ಎಸ್.ಸಿ ಪೂರ್ವಭಾವಿ ತರಬೇತಿಗೆ ಅರ್ಜಿ ಸಲ್ಲಿಸಿ ಸಾಮಾನ್ಯ ಅರ್ಹತಾ ಪರೀಕ್ಷೆಯನ್ನು ಬರೆದ ಅಭ್ಯರ್ಥಿಗಳು ಸಹ ಕೆ.ಎ.ಎಸ್ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ.
- ತಪ್ಪು ಮಾಹಿತಿಯ ಕಾರಣದಿಂದ ಉಂಟಾಗಬಹುದಾದ ಲೋಪಗಳಿಗೆ ಸಂಬಂಧಪಟ್ಟ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ.
- ನಿಗಧಿತ ದಿನಾಂಕದಂದು ಪ್ರವೇಶ ಪರೀಕ್ಷೆ, ಕೌನ್ಸಿಲಿಂಗ್, ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು, ಆಯ್ಕೆಗೆ ಪರಿಗಣಿಸುವುದಿಲ್ಲ. ಇಂತಹ ನಿರ್ಲಕ್ಷಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**ಸಹಿ/-**
ಸಹಾಯಕ ನಿರ್ದೇಶಕರು,
ಇಂದಿರಾಗಾಂಧಿ ವೃತ್ತಿಅಭಿವೃದ್ಧಿ ಕೇಂದ್ರ,
ಬೆಂಗಳೂರು.